SEVA BHARATHI
सेवा ही परमो धर्मः

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾಲೂಕು ಇದರ ತ್ರೈಮಾಸಿಕ ನ್ಯೂಸ್‌ಲೆಟರ್

ಸಂಪುಟ – 3 | ಸಂಚಿಕೆ – 2 ಏಪ್ರಿಲ್–ಜೂನ್ 2021

ಕಛೇರಿ : ಸೇವಾನಿಕೇತನ, ಕನ್ಯಾಡಿ II, ಧರ್ಮಸ್ಥಳ ಅಂಚೆ ಮತ್ತು ಗ್ರಾಮ, ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ, ಕರ್ನಾಟಕ – 574 216

## ನಮ್ಮಿಂದಿಷ್ಟು...

ಕಳೆದ 17 ವರ್ಷಗಳಿಂದ ಸೇವಾಭಾರತಿಯ ಸಾಮಾಜಿಕ ಸೇವೆಗಳಲ್ಲಿ ನಿರತವಾಗಿದೆ. ಸೇವೆಯಲ್ಲಿ ಆಸಕ್ತಿಯಿರುವ ಅನೇಕ ಕಾರ್ಯಕರ್ತರ, ಕೊಡುಗೈದಾನಿಗಳ ನಿಸ್ವಾರ್ಥ ಪರಿಶ್ರಮಗಳಿಂದ ಇದು ಸಾಧ್ಯವಾಗುತ್ತಿದೆ.

ಈ ಸೇವಾ ಕಾರ್ಯಗಳು ಅನೇಕರಿಗೆ ಮತ್ತು ಅನೇಕ ಸಂಸ್ಥೆಗಳಿಗೂ ಪ್ರೇರಣೆಯಾಗಿದೆ ಮತ್ತು ಅನೇಕರಿಗೆ ಪ್ರೇರಣೆಯಾಗಬೇಕು. ಸಾಮಾಜಿಕ ಕೊರತೆ ಮತ್ತು ದೌರ್ಬಲ್ಯಗಳನ್ನು ನೀಗಿಸಿ ಬಲಯುತ ಸಮಾಜದ ನಿರ್ಮಾಣಕ್ಕೆ ಕಂಕಣಬದ್ಧರಾಗಬೇಕೆಂಬ ನಿಟ್ಟಿನಲ್ಲಿ ಪ್ರಕಟಿಸುತ್ತಿರುವುದೇ ಸೇವಾಪಥ ತ್ರೈಮಾಸಿಕ e–ನ್ಯೂಸ್ ಲೆಟರ್

ಸೇವಾಧಾಮ ಒಂದು ಅದ್ಭುತವಾದ ಪರಿಣಾಮಕಾರಿಯಾದ ಸೇವಾ ಪ್ರಕಲ್ಪವಾಗಿ ಮುನ್ನಡೆಯುತ್ತಿದೆ. ಬೆನ್ನುಮೂಳೆ ಮುರಿತಕ್ಕೊಳಗಾದವರ ಆಶಾಕಿರಣವಾಗಿ 6 ಜಿಲ್ಲೆಗಳಲ್ಲಿ ಗಣನೀಯ ಪ್ರಯತ್ನದ ಫಲವಾಗಿ ಅನೇಕ ಸಂಘ–ಸಂಸ್ಥೆಗಳು ನಮ್ಮೊಂದಿಗೆ ಕೈಜೋಡಿಸುತ್ತಿವೆ. ಎಪಿಡಿ ಬೆಂಗಳೂರು, ಧ್ವನಿ ಫೌಂಡೇಶನ್ ಬೆಂಗಳೂರು, ಎಸಿಇ ಮ್ಯಾನ್ಯುಫ್ಯಾಕ್ಚರಿಂಗ್ ಸಿಸ್ಟಮ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು, ಎಲ್ಐಸಿ ಗೋಲ್ಡನ್ ಜುಬಿಲಿ ಫೌಂಡೇಶನ್ ಮುಂಬಯಿ ಇವುಗಳ ಪಾತ್ರ ಬಹುಮುಖ್ಯವಾಗಿದೆ.

ಕೊರೋನಾ ಮಹಾಮಾರಿಯಿಂದಾಗಿ ಸಮಸ್ಯೆಗಳನ್ನು ಸಾವರಿಸಿಕೊಂಡು ಗುರಿಮುಟ್ಟಬೇಕಾಗಿದೆ. ರಕ್ತದಾನ ಶಿಬಿರಗಳು, ಉಚಿತ ಟೈಲರಿಂಗ್ ತರಬೇತಿ ಶಿಬಿರಗಳು ನಿಧಾನವಾಗಿ ಹಳಿಗೆ ಬರಬೇಕಿದೆ. ಆ ನಿಟ್ಟಿನಲ್ಲಿ ಪ್ರಯತ್ನವಂತೂ ಇದೆ. ಒಟ್ಟಿನಲ್ಲಿ ಸೇವೆ ನಿತ್ಯ ಕಾಯಕವಾಗಬೇಕಿದೆ. ತನು–ಮನ–ಧನ ಸಮಯಗಳ ಅರ್ಪಣೆ ಮೂಲಕ ಸಮಾಜವನ್ನು ಗಟ್ಟಿಗೊಳಿಸೋಣ.


**॥ ಸೇವಾ ಹಿ ಪರಮೋ ಧರ್ಮಃ ॥**

ನಿಮ್ಮವ
**ಕೆ. ವಿನಾಯಕ ರಾವ್**

## ಏಪ್ರಿಲ್ ತಿಂಗಳ ವರದಿಗಳು

### ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಸಹಾಯಹಸ್ತ

### ರೂ. 1 ಲಕ್ಷ ದೇಣಿಗೆ




ದಿನಾಂಕ ಏಪ್ರಿಲ್ 3, 2021ರಂದು ಧರ್ಮಸ್ಥಳದ ನಮಿತಾ ಸ್ಟೋರ್‌ನ ಮಾಲಕ ಡಿ.ಜಿ. ಕೃಷ್ಣ ಭಟ್ ಇವರ ಕುಟುಂಬವು ಸೇವಾಧಾಮಕ್ಕೆ ಭೇಟಿ ನೀಡಿ ಅಲ್ಲಿನ ಸೇವಾಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನು ಸೇವಾಭಾರತಿ ಕಾರ್ಯಾಲಯ ಸೇವಾನಿಕೇತನದಲ್ಲಿ ಹಸ್ತಾಂತರಿಸಿದರು. ಚೆಕ್‌ನ್ನು ಸ್ವೀಕರಿಸಿದ ಸೇವಾಭಾರತಿಯ ಖಜಾಂಚಿ ಬಿ. ಕೃಷ್ಣಪ್ಪ ಗುಡಿಗಾರ್ ಕುಟುಂಬಕ್ಕೆ ಕೃತಜ್ಞತೆ ತಿಳಿಸಿದರು.

## ಮೇ ತಿಂಗಳ ವರದಿಗಳು

### ಕೊರೋನಾ ರೋಗಿಗಳಿಗೆ ಮಾನವೀಯತೆಯ ನೆರವು



ಸೇವಾಭಾರತಿ ವತಿಯಿಂದ ಬೆಳ್ತಂಗಡಿ ತಾಲೂಕಿನಲ್ಲಿರುವ ಕೊರೋನಾ ರೋಗಿಗಳಿಗೆ ಧೈರ್ಯ ತುಂಬಿ ಉಚಿತವಾಗಿ ಸಂಸ್ಥೆಯ ಆಂಬುಲೆನ್ಸ್‌ನಲ್ಲಿ ಅವರಿಗೆ ಧೈರ್ಯ ತುಂಬಿ ಸರಕಾರಿ ಆಸ್ಪತ್ರೆಗೆ ದಾಖಲಿಸಲು ಸಹಾಯ ಮಾಡಲಾಯಿತು. ಈ ಸೇವಾಕಾರ್ಯಕ್ಕೆ ಕೈ ಜೋಡಿಸಿದ ಸೇವಾಭಾರತಿಯ ಕಾರ್ಯಾಲಯ ಪ್ರಮುಖ್ ಚಂದನ್ ಗುಡಿಗಾರ್ ಇವರಿಗೆ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಅಭಿನಂದನೆ ತಿಳಿಸಿದರು.

## ಸೇವಾಭಾರತಿಯಿಂದ ಉಚಿತ ವಾಹನ ವ್ಯವಸ್ಥೆ



ಸೇವಾಭಾರತಿ ಕನ್ಯಾಡಿ ಮತ್ತು ಸೇವಾಧಾಮ ಇದರ ವತಿಯಿಂದ ಹತ್ಯಡ್ಕ, ಕೊಕ್ಕಡ ಸುತ್ತಮುತ್ತಲಿನ ಎಂಡೋಸಲ್ಫಾನ್ ಮತ್ತು ಸೇವಾಧಾಮ ಕೇಂದ್ರದಲ್ಲಿನ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕೊರೋನ ನಿಯಂತ್ರಣ ಲಸಿಕೆ ಪಡೆಯಲು ಉಚಿತ ವಾಹನದ ವ್ಯವಸ್ಥೆಯನ್ನು ಮಾಡಲಾಯಿತು. ಒಟ್ಟು 21 ಮಂದಿ ದಿವ್ಯಾಂಗರು ಹಾಗೂ ಅವರ ಪೋಷಕರು ಉಚಿತ ವಾಹನದ ವ್ಯವಸ್ಥೆಯನ್ನು ಸದುಪಯೋಗ ಪಡೆದುಕೊಂಡರು.



ಒಂದು ಸಾಮಾನ್ಯ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರಕುತ್ತದೆ.

– ಸ್ವಾಮಿ ವಿವೇಕಾನಂದ

# ಜೂನ್ ತಿಂಗಳ ವರದಿಗಳು

## ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಮಾಹಿತಿ

ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಸೇವಾಭಾರತಿಯ ಸಲಹಾ ಸಮಿತಿ ಸದಸ್ಯರು ಹಾಗೂ ಮಕ್ಕಳ ರಕ್ಷಣಾ ನೀತಿಯ ಅಧ್ಯಕ್ಷರಾದ ಶ್ರೀಮತಿ ಮನೋರಮಾ ಭಟ್ ಇವರು ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಸೇವಾಭಾರತಿಯ ಸಿಬ್ಬಂದಿಗಳು ಮತ್ತು ಸೇವಾಧಾಮದ ಶಿಬಿರಾರ್ಥಿಗಳು ಹಾಗೂ ಪೋಷಕರಿಗೆ ಜಾಗೃತಿಯನ್ನು ಮೂಡಿಸಿ ಕಾನೂನು ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಮ್ಯಾನೇಜರ್ ಹಾಗೂ ಮಕ್ಕಳ ರಕ್ಷಣಾ ನೀತಿಯ ಸದಸ್ಯರಾದ ಮೋಹನ್ ಎಸ್., ಸೇವಾಭಾರತಿಯ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್ ಎಮ್. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸೇವಾಧಾಮದ ಪ್ರೋಗ್ರಾಂ ಮ್ಯಾನೇಜರ್ ಅಖಿಲೇಶ್ ಎ. ಇವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಜಾಗೃತಿ ಕಾರ್ಯಕ್ರಮದಲ್ಲಿ ಸೇವಾಧಾಮದ ಶಿಬಿರಾರ್ಥಿಗಳು ಮತ್ತು ಅವರ ಪೋಷಕರು ಹಾಗೂ ಸೇವಾಭಾರತಿ ಸಿಬ್ಬಂದಿವರ್ಗ ಭಾಗವಹಿಸಿದರು.




## ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ




ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಸಿ.ಎಂ.ಎಸ್ ಗವರ್ನೆನ್ಸ್ ಉದ್ಯೋಗಿಯಾಗಿರುವ ಅವಿನಾಶ್ ಎ.ಆರ್.ರವರು ಸೇವಾಧಾಮಕ್ಕೆ ಭೇಟಿ ನೀಡಿ ಅಲ್ಲಿನ ಶಿಬಿರಾರ್ಥಿಗಳಿಗೆ ಸರ್ಕಾರದಿಂದ ಸಿಗುವ

ಪರಿಹಾರ ಮತ್ತು ಸೌಲಭ್ಯಗಳ ಬಗ್ಗೆ ಮಾಹಿತಿ ಹಾಗೂ ಅದನ್ನು ಸದುಪಯೋಗಪಡಿಸಿಕೊಳ್ಳುವ ರೀತಿಯ ಬಗ್ಗೆ ಮಾಹಿತಿ ನೀಡಿದರು. ಸೇವಾಧಾಮ ಕೇಂದ್ರದ ಎಲ್ಲ ಶಿಬಿರಾರ್ಥಿಗಳನ್ನು ಹುರಿದುಂಬಿಸಿ ಎಲ್ಲರಲ್ಲಿಯೂ ಧೈರ್ಯ ಹಾಗೂ ವಿಶ್ವಾಸ ತುಂಬಿಸಿ ಅವರನ್ನು ಸಮಾಜದಲ್ಲಿ ಉತ್ತಮ ನಾಗರಿಕರನ್ನಾಗಿ ಮಾಡಲು ಧೈರ್ಯ ತುಂಬಿದರು. ಸೇವಾಭಾರತಿಯ ಸಿಬ್ಬಂದಿಯಾದ ಅಖಿಲೇಶ್ ಎ. ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

## ಬೆನ್ನುಹುರಿ ಅಪಘಾತ ಮತ್ತು ಒತ್ತಡದ ನಿರ್ವಹಣೆ ಬಗ್ಗೆ ಮಾಹಿತಿ




ಸೇವಾಧಾಮದ ಸನಿವಾಸಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ಒತ್ತಡದ ನಿರ್ವಹಣೆ ಬಗ್ಗೆ ಮಾಹಿತಿ ಹಾಗೂ ಅದರ ಪರಿಣಾಮದ ಬಗ್ಗೆ ವಿವರವಾಗಿ ಮಾಹಿತಿ ನೀಡಿ ಬೆನ್ನುಹುರಿ ಅಪಘಾತ ದಿಂದ ಉಂಟಾಗುವ ಸಮಸ್ಯೆ ಹಾಗೂ ಅದನ್ನು ಎದುರಿಸುವ ರೀತಿ ಮತ್ತು ದೈನಂದಿನ ಜೀವನದಲ್ಲಿ ಆಗುವ ಬದಲಾವಣೆ ಮತ್ತು ವ್ಯತ್ಯಾಸಗಳ ಬಗ್ಗೆ ಸೇವಾಭಾರತಿಯ ಸಿಬ್ಬಂದಿಯಾದ ಅಖಿಲೇಶ್ ಎ. ಇವರು ವಿವರವಾಗಿ ತಿಳಿಸುತ್ತಾ ಪರಿಣಾಮವನ್ನು ತಡೆಗಟ್ಟುವ ರೀತಿ ಮತ್ತು ಆಹಾರ ಕ್ರಮಗಳ ಬಗ್ಗೆಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಸಿಬ್ಬಂದಿಗಳು ಮತ್ತು ಸೇವಾಧಾಮದ ಶಿಬಿರಾರ್ಥಿಗಳು ಹಾಗೂ ಅವರ ಪೋಷಕರು ಭಾಗವಹಿಸಿದರು.

## ಕೋವಿಡ್ ಶ್ರಮಿಕ ಸೇವಾ ಕೇಂದ್ರಕ್ಕೆ ಆಂಬ್ಯುಲೆನ್ಸ್ ಸೇವೆ




ದಿನಾಂಕ ಮೇ 11, 2021ರಂದು ಶ್ರಮಿಕ ಸೇವಾ ಕೇಂದ್ರ ಮತ್ತು ಸೇವಾಭಾರತಿ ಬೆಳ್ತಂಗಡಿ ಇವುಗಳ ಸಂಯುಕ್ತ ಆಶ್ರಯದೊಂದಿಗೆ ಉಜಿರೆ ಶಾರದಾ ಮಂಟಪದಲ್ಲಿ 24x7 ಕೋವಿಡ್ ಸಹಾಯ ಕೇಂದ್ರವು ತೆರೆದಿದ್ದು ಮಾನ್ಯ ಶಾಸಕರ ಸೂಚನೆ ಮೇರೆಗೆ ಸಂಸ್ಥೆಯ ಆಂಬ್ಯುಲೆನ್ಸ್‌ನ್ನು ನೀಡಲಾಯಿತು. ಆಂಬ್ಯುಲೆನ್ಸ್ ನಿರ್ವಹಣೆಯನ್ನು ಶ್ರಮಿಕ ಸೇವಾಕೇಂದ್ರ ನೋಡಿಕೊಳ್ಳುತ್ತದೆ ಎಂದು ಪ್ರತಿನಿಧಿಗಳು ಸೂಚಿಸಿದ ಕೂಡಲೇ ಕೋವಿಡ್ ಸೇವಾ ಕೇಂದ್ರಕ್ಕೆ ಆಂಬ್ಯುಲೆನ್ಸ್ ನೀಡಲಾಯಿತು.

## ಕೋವಿಡ್ ಲಸಿಕೆಗೆ ಉಚಿತ ವಾಹನ ವ್ಯವಸ್ಥೆ

ದಿನಾಂಕ ಮೇ 31, 2021ರಂದು ಕೊಕ್ಕಡ ಗ್ರಾಮ ಪಂಚಾಯತ್‌ನ ಅಧ್ಯಕ್ಷರ ಅಪೇಕ್ಷೆಯಂತೆ ದಿವ್ಯಾಂಗರು ಕೋವಿಡ್ ಲಸಿಕೆ ಪಡೆದುಕೊಳ್ಳಲು ಅನುಕೂಲವಾಗುವಂತೆ ನಮ್ಮ ಕಚೇರಿಯ ಬೊಲೆರೋ ವಾಹನ ಸೇರಿ ಇನ್ನೊಂದು ಖಾಸಗಿ ವಾಹನವನ್ನು ಈ ಉದ್ದೇಶಕ್ಕಾಗಿ ಕಳುಹಿಸಿಕೊಡಲಾಯಿತು. ಹತ್ಯಡ್ಕ ಮತ್ತು ಕೊಕ್ಕಡ ಸುತ್ತಮುತ್ತಲಿನ 21 ದಿವ್ಯಾಂಗರು ಇದರ ಸದುಪಯೋಗವನ್ನು ಪಡೆದುಕೊಂಡರು.

## ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಇವರಿಂದ ಮೆಡಿಕಲ್ ಕಿಟ್ ಕೊಡುಗೆ




ದಿನಾಂಕ ಜೂನ್ 25, 2021ರಂದು ಉಡುಪಿ ಜಿಲ್ಲೆಯ ಬೆನ್ನುಮೂಳೆ ಮುರಿತಕ್ಕೊಳಗಾದವರು 50 ಮಂದಿಗೆ ಮೆಡಿಕಲ್ ಕಿಟ್‌ಗಳನ್ನು ಕೊಡವೂರಿನ ದಿವ್ಯಾಂಗ ರಕ್ಷಣಾ ಸಮಿತಿಯ ಸಹಾಯಹಸ್ತದಲ್ಲಿ ವಿತರಿಸಲಾಯಿತು. ಒಟ್ಟು 28 ಸಾವಿರ ಮೌಲ್ಯದ ಮೆಡಿಕಲ್ ಕಿಟ್‌ಗಳನ್ನು ದಿವ್ಯಾಂಗರ ಮನೆಮನೆಗೆ ತೆರಳಿ ನೀಡಲಾಯಿತು. ಈ ಸಂದರ್ಭದಲ್ಲಿ ಕೊಡವೂರು ನಗರಸಭಾ ಸದಸ್ಯ ಹಾಗೂ ಸೇವಾಧಾಮದ ನಿರ್ದೇಶಕರಾದ ಕೆ. ವಿಜಯ ಕೊಡವೂರು, ಕೊಡವೂರಿನ ಕಾರ್ಯಕರ್ತರಾದ ವಿಷ್ಣು ಭಟ್, ಧಾನ್ಯಲಕ್ಷ್ಮಿ ರೈಸ್‌ಮಿಲ್‌ನ ಮಾಲಕರಾದ ಮಧ್ವಮೂರ್ತಿ, ಸಕ್ಷಮ ಉಡುಪಿ ಜಿಲ್ಲೆಯ ಅಧ್ಯಕ್ಷರಾದ ಲತಾ ಭಟ್, ಡಿ.ಎನ್.ಎ. ಮ್ಯಾನೇಜರ್ ರೂಪಲಕ್ಷ್ಮಿ ಮತ್ತು ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರಿನ ಸ್ವಯಂಸೇವಕರು ಹಾಗೂ ಸೇವಾಭಾರತಿಯ ಸಿಬ್ಬಂದಿಗಳಾದ ಮನು ಆರ್. ಮತ್ತು ಆಶ್ರಿತ್ ಸಿ.ಪಿ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಡಿಯರ್ ಲೈಫ್‌ನಿಂದ ರೂಪಾಯಿ 1,63,000/– ಮೌಲ್ಯದ ಕಿಟ್‌ಗಳ ಕೊಡುಗೆ


ದಿನಾಂಕ ಜೂನ್ 25, 2021 ರಂದು ಸೇವಾಧಾಮದ ನಿರ್ದೇಶಕರು ಹಾಗೂ ಡಿಯರ್ ಲೈಫ್ ಎಂಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಡಿಸ್ಟ್ರಿಬ್ಯೂಟರ್ ಆದ ಉಡುಪಿಯ ರಾಯನ್ ಫೆರ್ನಾಂಡಿಸ್‌ರವರ ಪರಿಶ್ರಮದಲ್ಲಿ ಅವರ ಕಂಪೆನಿಯಿಂದ ರೂಪಾಯಿ



600 ಮೌಲ್ಯದ 50 ಮಂದಿ ಉಡುಪಿ ಜಿಲ್ಲೆಯಲ್ಲಿರುವ ದಿವ್ಯಾಂಗರಿಗೆ 1000 ಮೌಲ್ಯದ ದಿನಸಿ ಕಿಟ್ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 130 ಮಂದಿಗೆ ದಿನಸಿ ಕಿಟ್ ಹಾಗೂ ಮೆಡಿಕಲ್ ಕಿಟ್‌ಗಳು ಲಭ್ಯವಾಗಿದ್ದು ಅದನ್ನು ಮನೆಮನೆಗೆ ತಲುಪಿಸಲು ಪ್ರಾರಂಭಿಸಲಾಯಿತು. ಎರಡು ಬೊಲೆರೋ ವಾಹನಗಳಲ್ಲಿ ಸೇವಾಧಾಮದ ನಿರ್ದೇಶಕರಾದ ವಿಜಯ ಕೊಡವೂರು ಮತ್ತು ವಿಷ್ಣು ಭಟ್ ಹಾಗೂ ಸಿಬ್ಬಂದಿಗಳು ಒಂದೇ ದಿನ ಉಡುಪಿ ಜಿಲ್ಲೆಯ 36 ಮಂದಿಗೆ ತಲುಪಿಸಿರುವುದು ಉಲ್ಲೇಖನೀಯ ಸಂಗತಿ. ಒಟ್ಟು 183 ಫಲಾನುಭವಿಗಳಿಗೆ ರೂ. 1,63,000/– ಮೌಲ್ಯದ ಕಿಟ್‌ಗಳನ್ನು ಒದಗಿಸಲಾಯಿತು. ಉಡುಪಿಯ ಧಾನ್ಯಲಕ್ಷ್ಮೀ ರೈಸ್‌ಮಿಲ್‌ನ ಮಧ್ವ ಮೂರ್ತಿಯವರ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಾಂಕೇತಿಕವಾಗಿ ಬಿತ್ತರಿಸುವ ಮೂಲಕ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಡಿಯರ್ ಲೈಫ್ ಕಂಪನಿಯ ಸಿ.ಎಂ.ಡಿ. ಪ್ರಮೋದ್ ಕುಮಾರ್‌ರವರಿಗೆ ಅಭಿನಂದನೆಗಳನ್ನು ತಿಳಿಸಲಾಯಿತು. ಈ ಸರಳ ಸಮಾರಂಭದಲ್ಲಿ ಸೇವಾಧಾಮದ ನಿರ್ದೇಶಕರಾದ ಕೆ. ವಿಜಯ ಕೊಡವೂರು, ಡಿ.ಎನ್.ಎ.ಯ. ಮ್ಯಾನೇಜರ್ ರೂಪಲಕ್ಷ್ಮಿ, ಕೊಡವೂರಿನ ಕಾರ್ಯಕರ್ತರಾದ ವಿಷ್ಣು ಭಟ್, ಸಕ್ಷಮ ಉಡುಪಿ ಜಿಲ್ಲೆ ಇದರ ಅಧ್ಯಕ್ಷರಾದ ಲತಾ ಭಟ್ ಮತ್ತು ಸ್ವಯಂಸೇವಕರು ಹಾಗೂ ಸೇವಾಭಾರತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಶ್ಚೇತನ ಕೇಂದ್ರ, ಸೌತಡ್ಕ, ಕೊಕ್ಕಡ


ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಯೋಗ ಹಾಗೂ ಪ್ರಾಣಾಯಾಮ ತರಬೇತಿ



ಗಾಲಿ ಕುರ್ಚಿ ಕೌಶಲ್ಯ ತರಬೇತಿ


ಜೀವನೋಪಾಯಕ್ಕಾಗಿ ಸ್ವ–ಉದ್ಯೋಗ ಯೋಜನೆ


ಪುನಶ್ಚೇತನ ಕೇಂದ್ರದಲ್ಲಿ ಸನಿವಾಸಿಗಳಿಗೆ ಜಿಮ್ ತರಬೇತಿ

ಸೇವಾಧಾಮದ ವಾರ್ಷಿಕ ನಿರ್ವಹಣೆಗಾಗಿ ರೂ. 48 ಲಕ್ಷವನ್ನು ಹೊಂದಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಉದಾರ ಸಹೃದಯಿಗಳ ಕೊಡುಗೆಗಳನ್ನು ನಿರೀಕ್ಷಿಸುತ್ತೇವೆ. ನಮ್ಮ ಸಂಸ್ಥೆಗೆ ನೀಡುವ ದೇಣಿಗೆಗಳಿಗೆ **80G** ಸೌಲಭ್ಯವೂ ಲಭ್ಯವಿದೆ.

| | | | |
|---|---|---|---|
| A/c Name | : Sevabharathi | IFSC Code | : CNRB0010168 |
| A/c No. | : 01682200072637 | Bank & Branch | : Canara Bank, Kokkada |

ವಿನ್ಯಾಸ ಮತ್ತು ಮುದ್ರಣ : ಮಂಜುಶ್ರೀ ಪ್ರಿಂಟರ್ಸ್, ಉಜಿರೆ